**ದಿನಾಂಕಃ 11-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

**7.** ನಂತರ ಎಸಿಬಿ ಪೊಲೀಸರು ವಿದ್ಯಾಧರ್ ಇವರ ಬಳಿ ಇದ್ದ ಚೌಧರಿಯವರಿಗೆ ಸಂಬಂಧಿಸಿದ ಕಡತವನ್ನು ತರಿಸಿದರು. ಆ ಕಡತದಲ್ಲಿರುವ ಕಾಲದಪತ್ರಗಳ ಒಂದು ಫೋಟೋ ಕಾಪಿಗಳನ್ನು ತೆಗೆದುಕೊಂಡು ಆ ಕಾಪಿಗಳಿಗೆ ನನ್ನ ಹಾಗೂ ಭೀಮಣ್ಣ ಇವರ ಸಹಿಗಳನ್ನು ಪಡೆದರು. ಈಗ ನನಗೆ ತೋರಿಸಲಾದ ನಿಪಿ–**14** ರ **209** ರಿಂದ **215** ಪುಟ ಸಂಖ್ಯೆಗಳ ಮೇಲೆ ಪ್ರತೀ ಪುಟದಲ್ಲೂ ನಾನು ಸಹಿ ಮಾಡಿದ್ದೇನೆ. ನನ್ನ ಹಾಗೇ ಭೀಮಣ್ಣ ಕೂಡಾ ಪ್ರತೀ ಪುಟದಲ್ಲಿ ಸಹಿ ಮಾಡಿದ್ದಾರೆ. ಆ ಪೈಕಿ ನಿಪಿ–**14** ರ ಪುಟ ಸಂ.**209** ರಲ್ಲಿ ನನ್ನ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ–**14**(ಹೆಚ್) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಸದರಿ ಪೊಲೀಸರು ಫೋಟೋ ತೆಗೆದು ಮಹಜರ್ ಮಾಡಿದರು. ಈಗ ನಾನು ನೋಡುತ್ತಿರುವಂತಹ ನಿಪಿ–**15** ರಿಂದ **21** ಫೋಟೋಗಳಲ್ಲಿ ನಾನು ಕೂಡಾ ಇದ್ದೇನೆ. ಈಗ ನನಗೆ ತೋರಿಸಲಾದ ನಿಪಿ–**4** ರ ಮೇಲೆ ಪ್ರತೀ ಪುಟದಲ್ಲೂ ನಾನು ಸಹಿಯನ್ನು ಮಾಡಿದುದ ಕೊನೆ ಪುಟದಲ್ಲಿರುವಂತಹ ನನ್ನ ಸಹಿಯನ್ನು ನಿಪಿ–**4**(ಬಿ) ಎಂದು ಗುರುತಿಸಲಾಯಿತು. ಭೀಮಣ್ಣ ಕೂಡಾ ಅದಕ್ಕೆ ಸಹಿ ಮಾಡಿದ್ದಾರೆ.

**8**. ನಂತರ ಆರೋಪಿತನನ್ನು ಕರೆದುಕೊಂಡು ಚಿತ್ರದುರ್ಗಕ್ಕೆ ನಾವುಗಳೆಲ್ಲಾ ಬಂದೆವು. ಆರೋಪಿತನನ್ನು ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದು ಗುರುತಿಸುತ್ತೇನೆ. ನಾವು ಠಾಣೆಗೆ ಬಂದಾಗ ಆಗಲೇ ಸಾಕಷ್ಟು ವೇಳೆಯಾಗಿದ್ದರಿಂದ ಮಾರನೇ ದಿನ ಬೆಳಗ್ಗೆ **10.00** ಗಂಟೆಗೆ ಎಸಿಬಿ ಕಛೇರಿಗೆ ಬರುವಂತೆ ಪೊಲೀಸರು ತಿಳಿಸಿದರು. ಅದರಂತೆ ದಿನಾಂಕ **15–02–2019** ರಂದು ನಾನು ಎಸಿಬಿ ಕಛೇರಿಗೆ ಹೋದೆ ಅಲ್ಲಿ ಭೀಮಣ್ಣ ಹಾಗೂ ಚೌಧರಿ ಇದ್ದರು. ಆಗ ಪೊಲೀಸರು ನಾವು ಧ್ವನಿ ಮಹಜರಿಗೆ ಸಹಕರಿಸಬೇಕೆಂದು ತಿಳಿಸಿದರು. ಅವರು ಚೌಧರಿಯವರ ಧ್ವನಿ ಮುದ್ರಣದ ಲೇಖಿ ಪ್ರತಿಯನ್ನು ಮಾಡಿ ನನಗೊಂದು ಪ್ರತಿ, ಭೀಮಣ್ಣನಿಗೊಂದ ಪ್ರತಿ ಹಾಗೂ ಚೌಧರಿಯವರಿಗೊಂದು ಪ್ರತಿ ಕೊಟ್ಟರು. ನಾನು ಆ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**22** ಎಂದು ಈಗಾಗಲೇ ಗುರುತಿಸಲಾದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**22**(ಎ) ಎಂದು ಗುರುತಿಸಲಾಯಿತು. ಭೀಮಣ್ಣ ಕೂಡಾ ಅದಕ್ಕೆ ಸಹಿ ಮಾಡಿದ್ದಾರೆ. ಆ ಲೇಖಿ ಪ್ರತಿಯನ್ನು ಚೌಧರಿಯವರು ಎರಡು ಸಾರಿ ಓದಿದರು ನಾನು ಮತ್ತು ಭೀಮಣ್ಣ ಅದನ್ನು ಕೇಳಿಸಿಕೊಂಡೆವು. ಅವರು ಓದಿದ್ದನ್ನು ಡಿವಿಡಿಯಲ್ಲಿ ಅವರು ಡೌನ್ ಲೋಡ್ ಮಾಡಿಕೊಂಡರು. ಆ ಡಿವಿಡಿಯನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಿದರು. ಆ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು **9** ಎಂದು ಗುರುತಿಸಲಾಗಿದ್ದು ಸದರಿ ಮುದ್ದೆ ಮಾಲು **9** ನ್ನು ಇಡಲಾದ ಲಕೋಟೆ ಮೇಲೆ ಲಗತ್ತಿಸಲಾದ ಚೀಟಿಗೆ ನನ್ನ ಸಹಿ ಇದೆ. ಸದರಿ ಸಹಿಯನ್ನು ಮುದ್ದೆ ಮಾಲು **9**(ಎ) ಎಂದು ಗುರುತಿಸಲಾಯಿತು. ನಂತರ ಫೋಟೋ ತೆಗೆದು ಮಹಜರ್ ಕ್ರಮ ಜರುಗಿಸಿದರು. ಸದರಿ ಫೋಟೋಗಳನ್ನು

ನೋಡುತ್ತಿದ್ದು ಅವುಗಳನ್ನು ನಿಪಿ–**23** ಹಾಗೂ **24** ಎಂದು ಈಗಾಗಲೇ ಗುರುತಿಸಲಾಗಿದೆ. ಈಗ ನನಗೆ ತೋರಿಸಲಾದ ನಿಪಿ–**5** ರ ಮೇಲೆ ನನ್ನ ಸಹಿ ಇದ್ದು ಅದನ್ನು ನಿಪಿ–**5**(ಬಿ) ಎಂದು ಗುರುತಿಸಲಾಯಿತು. ಅದಕ್ಕೆ ಭೀಮಣ್ಣ ಕೂಡಾ ಸಹಿ ಮಾಡಿದ್ದಾರೆ.

**9**. ದಿನಾಂಕ **20–03–2019** ರಂದು ಎಸಿಬಿ ಪೊಲೀಸರು ನನ್ನನ್ನು ಕರೆಸಿದ್ದರು. ಅಲ್ಲಿ ವಿದ್ಯಾಧರ್ ಹಾಗೂ ಭೀಮಣ್ಣ ಇದದರು. ಆರೋಪಿತನ ಧ್ವನಿ ಮುದ್ರಿಕೆಯನ್ನು ಎಫ್.ಎಸ್.ಎಲ್.ಗೆ ಕಳುಹಿಸಬೇಕಾಗಿದೆ ಎಂದು ಹೇಳಿ ನಮಗೆ ಸಹಕರಿಸಲು ಹೇಳಿದರು. ಆಗ ಪೊಲೀಸರು ಆರೋಪಿತನ ಧ್ವನಿ ಮುದ್ರಿಕೆಯ ಲೇಖಿ ಪ್ರತಿಯನ್ನು ಮಾಡಿದರು. ಆ ಲೇಖಿ ಪ್ರತಿ ನೋಡುತ್ತಿದ್ದು ಅದನ್ನು ನಿಪಿ–**27** ಎಂದು ನನ್ನ ಸಹಿಯನ್ನು ನಿಪಿ–**27**(ಎ) ಎಂದು ಗುರುತಿಸಲಾಯಿತು. ಆ ಲೇಖಿ ಪ್ರತಿಯ ಮೂರು ಪ್ರತಿಗಳನ್ನು ತಯಾರಿಸಿ ನನಗೊಂದು ಪ್ರತಿ, ಭೀಮಣ್ಣನಿಗೊಂದು ಪ್ರತಿ ಹಾಗೂ ಆರೋಪಿತನಿಗೊಂದು ಪ್ರತಿ ನೀಡಿದರು. ಆ ಲೇಖಿ ಪ್ರತಿಯನ್ನು ಆರೋಪಿ ಎರಡು ಸಾರಿ ಓದಿದರು ಅದನ್ನು ನಾವು ಗಮನವಿಟ್ಟು ಕೇಳಿದೆವು. ಅವರು ಓದಿರುವುದನ್ನು ಧ್ವನಿಮುದ್ರಿಸಿಕೊಂಡು ಒಂದು ಡಿವಿಡಿಯಲ್ಲಿ ಹಾಕಿ ಒಂದು ಲಕೋಟೆಯಲ್ಲಿ ಇಟ್ಟು ಸೀಲು ಮಾಡಿದರು. ಅಲ್ಲದೇ ಪಂಚನಾಮೆ ಕಾಲಕ್ಕೆ ನಾವು ಇದ್ದ ಬಗ್ಗೆ ಫೋಟೋ ತೆಗೆದರು. ಅ ಡಿವಿಡಿ ನೋಡಿದೆ ಗುರುತಿಸಬಲ್ಲೆ. ಈಗ ಆ ಫೋಟೋಗಳನ್ನು ನೋಡುತ್ತಿದ್ದು ಸದರಿ ಫೋಟೋಗಳನ್ನು ನಿಪಿ–**28** ಹಾಗೂ **29** ಎಂದು ಗುರುತಿಸಲಾಯಿತು. ಆಗ ತಯಾರಿಸಲಾದಂತಹ ಮಹಜರ್ ನೋಡುತ್ತಿದ್ದು ಅದನ್ನು ನಿಪಿ–**30** ಎಂದು ನನ್ನ ಸಹಿಯನ್ನು ನಿಪಿ–**30**(ಎ) ಎಂದು ಗುರುತಿಸಲಾಯಿತು. ಆ ಎಲ್ಲಾ ವಸ್ತುಗಳ ಮೇಲೆ ಎಫ್ ಎಂಬ ಸೀಲನ್ನು ಹಾಕಲಾಯಿತು. ಆ ಸೀಲನ್ನು ಸದರಿ ಭೀಮಣ್ಣನ ಕೈಗೆ ಕೊಟ್ಟರು.

( ಸದರಿ ಭೀಮಣ್ಣ – ಚಾಸಾ–**3** ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವರು ಆ ಸೀಲನ್ನು ತಂದಿರುತ್ತಾರೆ ಎಂದು ಮತ್ತು ಅದನ್ನು ಈ ಸಾಕ್ಷಿದಾರರಿಗೆ ತೋರಿಸಲು ಅಭಿಯೋಜಕರು ಅನುಮತಿ ಕೋರಿದ್ದು ಆರೋಪಿ ಪರ ವಕೀಲರಾದ ಶ್ರೀ ಜೆಎಸ್ಎಸ್ ಇವರ ಸಮಕ್ಷಮದಲ್ಲಿ ಚಾಸಾ–**3** ಅದನ್ನು ಹಾಜರುಪಡಿಸಿರುತ್ತಾರೆ).

ಸದರಿ ಸೀಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **15** ಎಂದು ಗುರುತಿಸಲಾಯಿತು. ಆರೋಪಿತನ ಧ್ವನಿ ಮುದ್ರಣ ಮಾಡಿಕೊಂಡ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ಸೀಲಾದ ಕವರಿನಲ್ಲಿ ಇಡಲಾಗಿದೆ.

(ವಿಶೇಷ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಕವರನ್ನು ಜೆಎಸ್ಎಸ್ ವಕೀಲರ ಸಮಕ್ಷಮ ತೆರೆಯಲಾಯಿತು.)

ಸದರಿ ಡಿವಿಡಿಯನ್ನು ನಿಪಿ–**31** ಎಂದು ಗುರುತಿಸಲಾಯಿತು. ಅದರ ಲಕೋಟೆ ಮೇಲೆ ನಮ್ಮ ಸಹಿವುಳ್ಳ ಚೀಟಿಯನ್ನು ಅಂಟಿಸಲಾಗಿದ್ದು, ನನ್ನ ಸಹಿಯನ್ನು ನಿಪಿ–**31**(ಎ) ಎಂದು ಗುರುತಿಸಲಾಯಿತು. ಈ ಕುರಿತು ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಮಾಡಿಕೊಂಡಿದ್ದಾರೆ.

**<u>ಪಾಟೀ ಸವಾಲು:</u>** ಶ್ರೀ ಜೆಎಸ್ ಎಸ್ ವಕೀಲರು  ಆರೋಪಿತನ ಪರವಾಗಿ ಪಾಟೀ ಸವಾಲಿಗೆ ಕಾಲಾವಕಾ ಕೋರಿದ್ದು ಕೇವಲ ಒಂದು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.